# ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು : ಮಾನ್ಯ ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : (33) 782
ಉತ್ತರಿಸಬೇಕಾದ ದಿನಾಂಕ : 18.12.2018

| ಕ್ರ ಸಂ: | ಪ್ರಶ್ನೆ | ಉತ್ತರಗಳು |
|---|---|---|
| ಅ) | ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಯಲ್ಲಿ ಆಗಿರುವ ಅವ್ಯವಹಾರ ಕುರಿತು "ತಾಂತ್ರಿಕ ಸಮಿತಿ" Technical Committee ರಚಿಸುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ದಿನಾಂಕ:28.07.2018ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದಂತೆ, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರೊಂದಿಗೆ ನಡೆದ ಸಭೆಯಲ್ಲಿ "ನೀರು ಶುದ್ಧೀಕರಣ ಘಟಕಗಳ ನಿರ್ವಹಣೆ ಹಾಗೂ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸಲು **ಉನ್ನತ ಮಟ್ಟದ ತಾಂತ್ರಿಕ ಸಮಿತಿ** ರಚಿಸಲು ತೀರ್ಮಾನಿಸಿದಂತೆ, ವಿಶೇಷ **ತಾಂತ್ರಿಕ ಸಮಿತಿಯನ್ನು (Technical Committee) ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/41/ಗ್ರಾನೀಸ(8)/2018ರಲ್ಲಿ ರಚಿಸಲಾಗಿದೆ.** |
| ಆ) | "ತಾಂತ್ರಿಕ ಸಮಿತಿ" Technical Committee ಯಲ್ಲಿ ಎಷ್ಟು ಸದಸ್ಯರಿದ್ದಾರೆ; (ವಿವರ ನೀಡುವುದು) | ಸದರಿ **ತಾಂತ್ರಿಕ ಸಮಿತಿಯಲ್ಲಿ** ಅಧ್ಯಕ್ಷರು ಸೇರಿದಂತೆ ಒಂಬತ್ತು ಸದಸ್ಯರಿದ್ದು, ವಿವರ ಈ ಕೆಳಗಿನಂತಿದೆ. |

| | | |
|---|---|---|
| 1 | ಅಧ್ಯಕ್ಷರು | ಕ್ಯಾಪ್ಟನ್ ರಾಜಾರಾವ್, ನಿವೃತ್ತ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬೆಂಗಳೂರು |
| 2 | ಸದಸ್ಯರು | ಡಾ|| ಅರುಣ್ ಇಸ್ಲೂರ್, ಪ್ರೊಫೆಸರ್, ಎನ್.ಐ.ಟಿ.ಕೆ., ಸುರತ್ಕಲ್ |
| 3 | ಸದಸ್ಯರು | ಮುಖ್ಯ ರಾಸಾಯನಿಕ ತಜ್ಞರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು |
| 4 | ಸದಸ್ಯರು | ಡಾ|| ಎಸ್.ಆರ್.ನಾಗನೂರು, ಗೌರವ ಕಾರ್ಯದರ್ಶಿ, ಗ್ರಾಮೀಣ ವೈದ್ಯಕೀಯ ಸೇವೆಗಳು, ಹುಲಿಕೋಟಿ, ಗದಗ ಜಿಲ್ಲೆ |
| 5 | ಸದಸ್ಯರು | ಶ್ರೀ ಎಸ್.ಜೆ.ಚನ್ನಬಸಪ್ಪ, ನಿವೃತ್ತ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬೆಂಗಳೂರು |
| 6 | ಸದಸ್ಯರು | ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಕಲಬುರಗಿ, ಬೆಳಗಾವಿ & ಮೈಸೂರು |
| 7 | ಸದಸ್ಯ ಕಾರ್ಯದರ್ಶಿ | ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬೆಂಗಳೂರು |

| | | |
|---|---|---|
| ಇ) | ಈವರೆಗೂ ಈ ಸಮಿತಿಯು ಎಷ್ಟು ಸಭೆಗಳನ್ನು ನಡೆಸಿದೆ; ರಾಜ್ಯದಲ್ಲಿ ಯಾವ ಯಾವ ಭಾಗಗಳಲ್ಲಿ ತನಿಖೆ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಕ್ಯಾಪ್ಟನ್ ರಾಜಾರಾವ್, ನಿವೃತ್ತ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ತಾಂತ್ರಿಕ ಸಮಿತಿ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10.12.2018ರಂದು **ತಾಂತ್ರಿಕ ಸಮಿತಿ ಸಭೆಯನ್ನು ನಡೆಸಲಾಗಿದೆ.** ನೀರು ಶುದ್ಧೀಕರಣ ಘಟಕಗಳ ನಿರ್ವಹಣೆ ಹಾಗೂ ಅನುಷ್ಠಾನದ ಬಗ್ಗೆ ಸುಧೀರ್ಘವಾಗಿ ಚರ್ಚೆ ಮಾಡಿ, ಘಟಕಗಳನ್ನು ಜರೂರಾಗಿ ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಸಮಿತಿಯಲ್ಲಿ ತೀರ್ಮಾನಿಸಲಾಯಿತು. |

ಸಂ:ಗ್ರಾಅಪ 112 ಗ್ರಾನೀಸ(3)18

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು